**ದಿನಾಂಕಃ 27-04-2024 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ</u>**

6. ನಾನು ಈ ಪ್ರಕರಣ ಅಲ್ಲದೇ ಇನ್ನೆರಡು ಲೋಕಾಯುಕ್ತ ಪ್ರಕರಣದಲ್ಲಿ ಸಾಕ್ಷಿಯಾಗಿದ್ದೇನೆ. ನಾನು ಮುಖ್ಯ ವಿಚಾರಣೆಯಲ್ಲಿ ಆರಕ್ಷಕ ಉಪಾಧೀಕ್ಷಕರು ಈ ಪ್ರಕರಣದ ದೂರನ್ನು ನನಗೆ ನೋಡಲು ನೀಡಿದರು ಎಂದು ಹೇಳಿದ್ದು ನಂತರ ಅದಕ್ಕೆ ನಾನು ರುಜು ಮಾಡಿದೆ ಎಂದು ಹೇಳಿದ್ದು ವಾಸ್ತವವಾಗಿ ದೂರನ್ನು ನೋಡಲು ಕೊಟ್ಟರು ಅದನ್ನು ನೋಡಿದೆ ಆದರೆ ಆಗ ಅನೇಕ ರುಜುಗಳನ್ನು ತೆಗೆದುಕೊಂಡಿರುವುದರಿಂದ ನಾನು ದೂರಿನ ಮೇಲೆ ನನ್ನ ರುಜು ಪಡೆದರು ಎಂದು ತಪ್ಪಾಗಿ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ . ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯ ಹೇಳುವಾಗ ಅದು ತಪ್ಪು ಎಂದು ನನಗೆ ಗೊತ್ತಾಗಲಿಲ್ಲ. ನ್ಯಾಯಾಲಯದಲ್ಲಿ ನಾನು ಸಾಕ್ಷ್ಯ ನುಡಿದಾಗ ಅದನ್ನು ನ್ಯಾಯಾಧೀಶರು ಉಕ್ತಲೇಖನ ನೀಡುವಾಗ ಆ ಉಕ್ತಲೇಖನದ ಕಡೆ ನಾನು ಗಮನ ನೀಡುವುದಿಲ್ಲ. ಆ ದಿನ ಒಟ್ಟು ಎಷ್ಟು ರುಜುಗಳನ್ನು ನನ್ನಿಂದ ಪಡೆದರು ಎಂದು ನನಗೆ ಹೇಳಲು ಆಗುವುದಿಲ್ಲ. ಆಗ ಜಪ್ತು ಮಾಡಿದ ಭಟ್ಟಿ ಇಳಿಸಿದ ನೀರು , ಹಣ ಇತ್ಯಾದಿ ಸುಮಾರು 7 ವಸ್ತುಗಳ ಮೇಲೆ ನನ್ನ ರುಜು ಪಡೆದರು. ಆದರೆ ನಿಖರವಾಗಿ ಎಲ್ಲಿ ಎಲ್ಲಿ ಎಂದು ಹೇಳಲಾಗುವುದಿಲ್ಲ. ಅವುಗಳನ್ನು ನೋಡಿದರೆ ಹೇಳುತ್ತೇನೆ. ಲೋಕಾಯುಕ್ತ ಪೊಲೀಸ್ ನವರು ನನ್ನ ಕೈಗೆ ರೂ. 3000/- ಕೊಟ್ಟು ಎಣಿಸುವಂತೆ ಹೇಳಿದ ಬಗ್ಗೆ ಪಂಚನಾಮೆಯಲ್ಲಿ ಬರೆದಿದ್ದಾರೆ. ಫಿನಾಪ್ತಲಿನ್ ಪುಡಿ ಲೇಪನ ಮಾಡುವುದಕ್ಕೆ ಮೊದಲು ನನಗೆ ಆ ನೋಟುಗಳನ್ನು ಕೊಟ್ಟರು. ಫಿನಾಪ್ತಲಿನ್ ಪುಡಿ ಲೇಪನ ಮಾಡಿದ ನಂತರ ಸಹ ನಾನು ಆ ನೋಟುಗಳನ್ನು ಎಣಿಸಿದೆ . ನಾನು ಆಗ ಎರಡು ಬಾರಿ ಆ ನೋಟುಗಳನ್ನು ಎಣಿಸಿದ್ದೇನೆ. ಎರಡು ಬಾರಿ ನಾನು ನೋಟುಗಳನ್ನು ಎಣಿಸಿದೆ ಎಂದು ಪಂಚನಾಮೆಯಲ್ಲಿ ಬರೆದಿದ್ದಾರಾ ಎಂದು ನನಗೆ ಗೊತ್ತಿಲ್ಲ. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಫಿನಾಪ್ತಲಿನ್ ಪುಡಿ ಲೇಪನ ಮಾಡಿದ ನೋಟುಗಳನ್ನು ಲಕೋಟೆಯಲ್ಲಿ ಹಾಕಲಿಲ್ಲ. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಫಿರ್ಯಾದುದಾರ ಸಿ.ಡಿ. ಹಾಜರುಪಡಿಸಿಲ್ಲ. ನನ್ನ ಮುಂದೆ ಆಗ ಮೊಬೈಲ್ ಅನ್ನು ಹಾಜರುಪಡಿಸಿರುವುದಿಲ್ಲ ಆದರೆ ಆರಕ್ಷಕ ಉಪಾಧೀಕ್ಷಕರಿಗೆ ನೀಡಿದ್ದನಂತೆ. ನನ್ನ ಮುಂದೆ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ

ಮೊಬೈಲ್ ನಲ್ಲಿರುವ ಸಂಭಾಷಣೆಯನ್ನು ಸಿ.ಡಿ. ಗೆ ಪರಿವರ್ತನೆ ಮಾಡಿರುವುದಿಲ್ಲ. ನನಗೆ ಮೊಬೈಲ್ ನಲ್ಲಿ ಇದ್ದ ಸಂಭಾಷಣೆಯನ್ನು ಹಚ್ಚಿ ಆಗ ಕೇಳಿಸಲಿಲ್ಲ. ಡಿಜಿಟಲ್ ವಾಯ್ಸ ರೆಕಾರ್ಡರ್ ಅಂದರೆ ಬೇರೆ ಮತ್ತು ಮೈಕ್ರೋ ಫೋನ್ ಎಂದರೆ ಬೇರೆ ಎಂದರೆ ಹೌದು . ಫಿರ್ಯಾದುದಾರನಿಗೆ ಮೈಕ್ರೋ ಫೋನ್ ನೀಡಿದ ಬಗ್ಗೆ ಪಂಚನಾಮೆಯಲ್ಲಿ ಬರೆದಿಲ್ಲ ಡಿಜಿಟಲ್ ವಾಯ್ಸ ರೆಕಾರ್ಡರ್ ನೀಡಿದ ಬಗ್ಗೆ ಬರೆದಿದ್ದಾರೆ. ಮುಖ್ಯ ವಿಚಾರಣೆಯಲ್ಲಿ ನಾನು ಮೈಕ್ರೋ ಫೋನ್ ಎಂದು ಹೇಳಿದ್ದೇನೆ ಎಂದರೆ ಮೈಕ್ರೋ ಫೋನ್ ಮತ್ತು ಡಿಜಿಟಲ್ ವಾಯ್ಸ ರೆಕಾರ್ಡರ್ ಎಂದರೆ ಒಂದೇ ಎಂದು ತಿಳಿದು ಹೇಳಿದ್ದೇನೆ. ಮೈಕ್ರೋ ಫೋನ್ ಮತ್ತು ಡಿಜಿಟಲ್ ವಾಯ್ಸ ರೆಕಾರ್ಡರ್ ಎಂದರೆ ಒಂದೇ ಸಾಧನ ಎಂದು ನನಗೆ ಯಾವಾಗ ಗೊತ್ತಾಯಿತು ಎಂದರೆ ಅದನ್ನು ಸರಿಯಾಗಿ ಹೇಳಲು ಆಗುವುದಿಲ್ಲ. ನಾನು ಯಾವ ಘಟನೆ ಬಗ್ಗೆಯೂ ಸಾಕ್ಷಿದಾರ ಆಗದೇ ಇರುವುದರಿಂದ ಅಪದ್ಧ ಹೇಳಿಕೆಗಳನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಫಿರ್ಯಾದಿಯು ಪೊಲೀಸ್ ನವರಿಗೆ ಯಾವುದೇ ನೋಟುಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಯಾವುದೇ ಫಿನಾಪ್ತಲಿನ್ ಪುಡಿ ಲೇಪನ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ರಾಸಾಯನಿಕ ಪ್ರಕ್ರಿಯೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಕೈಯನ್ನು ಯಾವುದೇ ದ್ರಾವಣದಲ್ಲಿ ಅದ್ದಿಲ್ಲ ಎಂದರೆ ಸರಿಯಲ್ಲ. ನಾವು ಕುಮಟಾಗೆ ಸಾಯಂಕಾಲ ಸುಮಾರು 7.10 ಗಂಟೆಗೆ ತಲುಪಿದೆವು . ಅಲ್ಲಿ ನಾವು 7.10 ಗಂಟೆಗೆ ತಲುಪಿದ ಬಗ್ಗೆ ಪಂಚನಾಮೆಯಲ್ಲಿ ಬರೆದಿದ್ದಾರೆ. ನನಗೆ ಸಮಯ ನೋಡಲು ಬರುತ್ತದೆ . ಈಗ ನ್ಯಾಯಾಲಯದಲ್ಲಿರುವ ಗಡಿಯಾರದಲ್ಲಿ ಸಮಯ ಮಧ್ಯಾಹ್ನ 12.15 ಗಂಟೆಯಾಗಿದೆ. ಸಂಜೆ 6.00 ಗಂಟೆ ಮತ್ತು 7.10 ಗಂಟೆಗೆ ವ್ಯತ್ಯಾಸ ಜಾಸ್ತಿ ಇದೆ ಎಂದರೆ ಸ್ವಲ್ಪ ಇದೆ . ಕುಮಟಾದ ತಾಲೂಕು ಪಂಚಾಯತಿ ಕಚೇರಿಗೆ ಹೋದ ಮೇಲೆ 10 ರಿಂದ 15 ನಿಮಿಷ ಅಲ್ಲಿ ಕಳೆದೆವು . ಆರೋಪಿ ಫಿರ್ಯಾದಿಯ ಪಕ್ಕದಲ್ಲಿದ್ದ ಕೋಣೆಗೆ ಹೋದ ಎಂಬುದನ್ನು ಪಂಚನಾಮೆಯಲ್ಲಿ ಬರೆದಿದ್ದಾರೆ. ಆ ಕಚೇರಿಯಲ್ಲಿ ಒಟ್ಟು ಎಷ್ಟು ಕೋಣೆ ಇದೆ ಎಂದು ನಿಖರವಾಗಿ ನನಗೆ ಹೇಳಲು ಆಗುವುದಿಲ್ಲ. ಆರೋಪಿ ಪಕ್ಕದ ಕೋಣೆಗೆ ಹೋದಾಗ ನಾನು ಆ ಕೋಣೆಯ ಬಾಗಿಲಿನ ಪಕ್ಕದಲ್ಲಿ ನಿಂತಿದ್ದೆ. ಆರೋಪಿಗೆ ನೋಟುಗಳನ್ನು ಕೊಡುವಾಗ ನಾನು ತಾಲೂಕು ಪಂಚಾಯತಿ ಕಚೇರಿಯ ಮುಖ್ಯ ದ್ವಾರದ ಬಳಿ ಇದ್ದೆ. ನಾನು ನಕ್ಷೆ ತಯಾರಿಸುವಾಗ ಅಭಿಯಂತರರಿಗೆ

ಆರೋಪಿ ಹೋದ ಕೊಠಡಿಯ ಬಾಗಿಲ ಪಕ್ಕದಲ್ಲಿ ನಾನು ನಿಂತಿದ್ದ ಜಾಗವನ್ನು ಮತ್ತು ತಾಲೂಕು ಪಂಚಾಯತಿ ಕಚೇರಿಯ ಮುಖ್ಯ ದ್ವಾರದ ಬಳಿ ನಾನು ನಿಂತಿದ್ದ ಜಾಗವನ್ನು ತೋರಿಸಿರುತ್ತೇನೆ. ನಕ್ಷೆಗೆ ನನ್ನ ರುಜು ಪಡೆದಿದ್ದಾರಾ ಎಂದು ನೆನಪಿಗೆ ಬರುತ್ತಿಲ್ಲ. ನಾನು ಎರಡೂ ಕಡೆ ನಿಂತಿದ್ದ ಜಾಗವನ್ನು ನಕ್ಷೆಯಲ್ಲಿ ತೋರಿಸಿದ್ದಾರಾ ಎಂದರೆ ತೋರಿಸಿರಬಹುದು. ನಾನು ಲೋಕಾಯುಕ್ತ ಪೊಲೀಸ್ ನವರಿಗೆ ಸಹ ನಾನು ನಿಂತಿದ್ದ ಮೇಲ್ಕಂಡ ಜಾಗವನ್ನು ತೋರಿಸಿರುತ್ತೇನೆ. ಪೊಲೀಸ್ ನವರು ಕರವಸ್ತ್ರವನ್ನು ಜಪ್ತು ಮಾಡಲಿಲ್ಲ.

7. ಆರೋಪಿ ಹಣ ತೆಗೆದುಕೊಂಡು ಕಚೇರಿಯಿಂದ ಬೈಕ್ ನಲ್ಲಿ ಹೋದ ಮೇಲೆ ಒಂದು ತಾಸಿಗೆ ಆರೋಪಿಯನ್ನು ಹಿಡಿದರು. ರಾತ್ರಿ ಸುಮಾರು 8.30 ಗಂಟೆಗೆ ಆರೋಪಿಯನ್ನು ಹಿಡಿದರು. ಆರೋಪಿಯನ್ನು ಹಿಡಿದ ಜಾಗದಲ್ಲಿ 15−20 ನಿಮಿಷ ಇದ್ದೆವು . ಅಲ್ಲಿಂದ ಪ್ರವಾಸಿ ಮಂದಿರ 4 ರಿಂದ 5 ಕಿ.ಮೀ. ದೂರದಲ್ಲಿ ಇದೆ. ಅಲ್ಲಿಗೆ ಹೋಗಲು ಸುಮಾರು 15 ನಿಮಿಷ ಹಿಡಿದಿರುತ್ತದೆ . ಆರೋಪಿಯು ಲೋಕಾಯುಕ್ತರವರ ಆರಕ್ಷಕ ಉಪಾಧೀಕ್ಷಕರ ವಾಹನದಲ್ಲಿ ಪ್ರವಾಸಿ ಮಂದಿರಕ್ಕೆ ಹೋದ . ಫಿರ್ಯಾದುದಾರ ನಾನು ಇದ್ದ ವಾಹನದಲ್ಲಿ ಬಂದ. ಆ ದಿನ ಲೋಕಾಯುಕ್ತ ಪೊಲೀಸ್ ನವರ ಎರಡು ವಾಹನ ಇದ್ದವು . ಆರೋಪಿಯನ್ನು ತಾಲೂಕು ಕಚೇರಿಯಿಂದ ಅವನು ಹೊರಟಾಗ ಅವನನ್ನು ಹಿಂಬಾಲಿಸಿದೆವು . ಆರೋಪಿ ಮಾರುಕಟ್ಟೆ ಒಳಗಡೆ ಪ್ರವೇಶಿಸಿದ ಮೇಲೆ ನಮಗೆ ಕಾಣಿಸಲಿಲ್ಲ. ತಾಲೂಕು ಪಂಚಾಯತಿ ಕಚೇರಿಯಿಂದ ಮಾರುಕಟ್ಟೆಗೆ ಸುಮಾರು ಒಂದುವರೆ ಕಿ.ಮೀ. ದೂರ ಇದೆ. ಆರೋಪಿಯನ್ನು ನಾವು 5 ನಿಮಿಷ ಹಿಂಬಾಲಿಸಿದೆವು ನಂತರ ಆರೋಪಿಯನ್ನು ನಾವು ಹುಡುಕಾಡುತ್ತಿದ್ದೆವು . ಆರೋಪಿಯನ್ನು ಎಲ್ಲಿ ಎಲ್ಲಿ ಹುಡುಕಾಡಿದೆವು ಎಂದು ಪಂಚನಾಮೆಯಲ್ಲಿ ಬರೆದಿಲ್ಲ. ನಾವು ಎರಡು ತಂಡ ಮಾಡಿಕೊಂಡು ಆರೋಪಿಯನ್ನು ಹುಡುಕಾಡಿದೆವು . ನಮ್ಮ ತಂಡದಲ್ಲಿ ಇನ್ನೊಬ್ಬ ಪಂಚ , ಫಿರ್ಯಾದುದಾರ ಮತ್ತು ಆರಕ್ಷಕ ಉಪಾಧೀಕ್ಷಕರು ಇದ್ದೆವು . ಇನ್ನೊಂದು ತಂಡದಲ್ಲಿ ಬಾಕಿ ಪೊಲೀಸ್ ನವರು ಇದ್ದರು. ನಾವು ಸುಮಾರು ಒಂದು ತಾಸು ಆರೋಪಿಯನ್ನು ಹುಡುಕಾಡಿದೆವು . ಎಲ್ಲಿ ಎಲ್ಲಿ ಆರೋಪಿಯನ್ನು ಹುಡುಕಾಡಿದೆವು ಎಂದರೆ ನನಗೆ ಕುಮಟಾ ಪಟ್ಟಣದ ಪ್ರದೇಶಗಳ ಪರಿಚಯ ಇಲ್ಲ. ನಾವು ಎಲ್ಲಿ ಎಲ್ಲಿ ಹುಡುಕಿದೆವು ಎಂಬ ಬಗ್ಗೆ ಛಾಯಾಚಿತ್ರ ತೆಗೆದಿರುವುದಿಲ್ಲ ಮತ್ತು ವಿಡಿಯೋ ಮಾಡಿರುವುದಿಲ್ಲ. ಮಾರುಕಟ್ಟೆ , ವಿಧ ವಿಧ

ಓಣಿಗಳು , ತಿರುವುಗಳು ಅಲ್ಲಿ ಎಲ್ಲಾ ಹೋಗಿ ಆರೋಪಿಯನ್ನು ಹುಡುಕಿದೆವು . ಇನ್ನೊಂದು ತಂಡದವರು ಎಲ್ಲಿ ಎಲ್ಲಿ ಆರೋಪಿಯನ್ನು ಹುಡುಕಿದರು ಎಂಬ ಬಗ್ಗೆ ನಮ್ಮ ಬಳಿ ಹೇಳಿದರು. ನಾವು ಎರಡೂ ತಂಡ ನಂತರ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ರಸ್ತೆಯಲ್ಲಿ ಭೇಟಿಯಾದೆವು. ಶಾಂತಿಕಾ ಪರಮೇಶ್ವರಿ ದೇವಸ್ಥಾನ ತಾಲೂಕು ಪಂಚಾಯತಿ ಕಚೇರಿಯಿಂದ ಸುಮಾರು 10 ನಿಮಿಷ ಬೈಕ್ ನಲ್ಲಿ ಹೋದರೆ ತಲುಪುವ ದೂರದಲ್ಲಿ ಇದೆ ಎಂದರೆ ಹೌದು . ಆರೋಪಿಯನ್ನು ಹುಡುಕಬೇಕಾದರೆ ಫಿರ್ಯಾದುದಾರ ನಮ್ಮ ಜೀಪ್ ನಲ್ಲಿ ಇದ್ದ. ನಾವು ಜೀಪ್ ನಲ್ಲಿ ಹಾಗೂ ನಡೆದುಕೊಂಡು ಆರೋಪಿಯನ್ನು ಹುಡುಕಾಡಿದೆವು .

8. ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ನಾನು ಸಾಕ್ಷ್ಯ ನೀಡಿದ್ದೇನೆ ಎಂದರೆ ಹೌದು . ಆ ಸಾಕ್ಷ್ಯದಲ್ಲಿ "ಗಟಾರದಲ್ಲಿ ಬಿದ್ದಿದ್ದ ಹಣವನ್ನು ಪೊಲೀಸ್ ಸಿಬ್ಬಂದಿ ತೆಗೆದರು " ಎಂದು ಹೇಳಿದ್ದೇನೆ ಎಂದರೆ ಹೌದು . ನಾನು ಲೋಕಾಯುಕ್ತ ಕಚೇರಿಯಲ್ಲಿ ಸಾಕ್ಷ್ಯ ನೀಡುವಾಗ ಸತ್ಯ ಹೇಳಿದ್ದೇನೆ. ಹಣ ತೆಗೆಯುವಾಗ ಬೆಳಕು ಇಲ್ಲದೇ ಇದ್ದದ್ದರಿಂದ ಬ್ಯಾಟರಿ ಉಪಯೋಗಿಸಿದರು ಎಂದು ಲೋಕಾಯುಕ್ತ ಇಲಾಖಾ ವಿಚಾರಣೆಯಲ್ಲಿ ಸಾಕ್ಷ್ಯ ಹೇಳಿದ್ದೇನೆ. (ಸಾಕ್ಷಿಗೆ ಇಲಾಖಾ ವಿಚಾರಣೆಯಲ್ಲಿ ಸಾಕ್ಷಿ ನುಡಿದಿದ್ದಾರೆ ಎಂದು ಹೇಳಿರುವ ಸಾಕ್ಷ್ಯದ ಪ್ರತಿಯನ್ನು ತೋರಿಸಿರುವುದಿಲ್ಲ). ಆರೋಪಿಯ ಬೈಕ್ ನ ಟ್ಯಾಂಕ್ ಕವರ್ ನಿಂದ ದಾಖಲಾತಿಗಳನ್ನು ವಶಪಡಿಸಿಕೊಂಡಿದ್ದನ್ನು ನಾನು ನೋಡಿರುವುದಿಲ್ಲ ಎಂದು ನಾನು ಸಾಕ್ಷ್ಯ ನೀಡಿದ್ದೇನೆ ಎಂದರೆ ಹೌದು . ಐಬಿ ಯಲ್ಲಿನ ಮಹಜರ್ ಬಗ್ಗೆ ಪ್ರಶ್ನೆ ಮಾಡಿದಾಗ ನನಗೆ ಅವುಗಳ ಪ್ರಕ್ರಿಯೆಗಳ ಬಗ್ಗೆ ನನಗೆ ತಿಳಿಯಲಿಲ್ಲ ಎಂದು ಇಲಾಖಾ ವಿಚಾರಣೆಯಲ್ಲಿ ಹೇಳಿದ್ದೇನೆ ಎಂದರೆ ಇರಬಹುದು ನನಗೆ ಪ್ರಕ್ರಿಯೆ ಬಗ್ಗೆ ತಿಳಿದಿತ್ತು . ಈ ಪ್ರಕರಣದಲ್ಲಿ ಮುಖ್ಯ ವಿಚಾರಣೆಯಲ್ಲಿ ಹಣವನ್ನು ನಾನೇ ಎತ್ತಿಕೊಟ್ಟೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ ನಾನು ತೋರಿಸಿದ್ದಾಗಿ ಹೇಳಿದ್ದೇನೆ . ಪಂಚನಾಮೆಯಲ್ಲಿ ಬಿಸಾಡಿದ ಲಂಚದ ಹಣವನ್ನು ಪಂಚ–1 ರವರಿಂದ ಹಾಜರುಪಡಿಸಿಕೊಂಡು ಎಂದು ಬರೆದಿದ್ದಾರಾ ಎಂದರೆ ನಾನು ಅದನ್ನು ಬರೆದಿದ್ದಾರಾ ಎಂದು ನೋಡಿರುವುದಿಲ್ಲ. ಟ್ರಾಪ್ ಪಂಚನಾಮೆಯಲ್ಲಿ ಪೊಲೀಸ್ ನವರು ಪಂಚ–1 ರವರಿಂದ ಲಂಚದ ಹಣವನ್ನು ಹಾಜರುಪಡಿಸಿಕೊಂಡರು ಎಂದು ಬರೆದಿರುವುದು ಸರಿ ಇದೆ . ಆದರೆ ನಾನು ಹಣವನ್ನು ಎತ್ತಿಕೊಡಲಿಲ್ಲ ಕೇವಲ ಹಣವನ್ನು ಕಾಣಿಸಿದೆ . ಪೊಲೀಸ್ ನವರು ಜಪ್ತು ಮಾಡಿ ಹಣವನ್ನು ನನಗೆ

ಕೊಟ್ಟರು ನಾನು ಅದನ್ನು ಹಾಜರುಪಡಿಸಿದೆ . ನಾನು ಅದನ್ನು ಆರಕ್ಷಕ ಉಪಾಧೀಕ್ಷಕರಿಗೆ ಹಾಜರುಪಡಿಸಿದೆ . ಆರಕ್ಷಕ ಪೇದೆ ಆ ಹಣವನ್ನು ಜಪ್ತು ಮಾಡಿದರು ನಾನು ಅದನ್ನು ಹಾಜರುಪಡಿಸಿದೆ . ಸದರಿ ಆರಕ್ಷಕ ಪೇದೆ ಹೆಸರು ನನಗೆ ಗೊತ್ತಿಲ್ಲ ಆದರೆ ಆರಕ್ಷಕ ಪೇದೆ ಆ ಹಣವನ್ನು ಎತ್ತಿದರು. ಆರಕ್ಷಕ ಪೇದೆ ಹಣವನ್ನು ಎತ್ತಿದ ಮೇಲೆ ಅದೇ ಜಾಗದಲ್ಲಿ ಹಣವನ್ನು ಜಪ್ತು ಮಾಡಿದರಾ ಎಂದರೆ ಹೌದು . ಅದೇ ಸ್ಥಳದಲ್ಲಿ ಹಣಕ್ಕೆ ಚೀಟಿ ಅಂಟಿಸಿದರಾ ಎಂದರೆ ನಿಖರವಾಗಿ ಅದನ್ನು ಹೇಳಲು ಆಗುವುದಿಲ್ಲ ಕಾರಣ ನಾವು ಅಲ್ಲಿಂದ ಪ್ರವಾಸಿ ಮಂದಿರಕ್ಕೆ ಹೋಗಿ ಅಲ್ಲಿ ಪಂಚನಾಮೆ ಮಾಡಿದರು. ದೇವಸ್ಥಾನದ ಬಳಿ ಹಣ ಸಿಕ್ಕಿದ ನಂತರ ಜೀಪ್ ಹತ್ತುವವರೆಗೆ ನನ್ನದಾಗಲಿ ಅಥವಾ ಹಣ ಎತ್ತಿದ ಆರಕ್ಷಕ ಪೇದೆಯ ಕೈಗಳನ್ನು ಲೋಕಾಯುಕ್ತ ಪೊಲೀಸ್ ನವರು ತೊಳೆಸಲಿಲ್ಲ. ಅಲ್ಲಿಂದ ನೋಟುಗಳನ್ನು ಎತ್ತಿದಾಗ ಅವುಗಳನ್ನು ಲಕೋಟೆಯಲ್ಲಿ ಹಾಕಿದರು. ಆ ಜಾಗದಲ್ಲಿ 50-60 ಜನ ಸೇರಿದ್ದರು. ಅಲ್ಲಿ ಬರವಣಿಗೆ ಮಾಡಲಿಲ್ಲ. ಅಲ್ಲಿದ್ದ 50-60 ಜನರ ಸಹಿಯನ್ನು ಪಡೆಯಲಿಲ್ಲ. ಅಲ್ಲಿ ಹಣವನ್ನು ಎತ್ತುವಾಗ ಛಾಯಾಚಿತ್ರ ತೆಗೆದಿರುತ್ತಾರೆ. ದೇವಸ್ಥಾನದ ಹತ್ತಿರ ಹಣ ಬಿಸಾಡಿದ್ದರು ಮತ್ತು ಅದನ್ನು ಅಲ್ಲಿಂದ ಎತ್ತಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಮತ್ತು ಅವನಿಗೆ ಹೆದರಿಸಿ ಸಹಿ ಪಡೆಯಲಾಗಿದೆ ಎಂದರೆ ಸುಳ್ಳು . ಅದೇ ದಿನ ರಾತ್ರಿ ಆರೋಪಿಯ ಕಚೇರಿಗೆ ದಾಳಿ ಮಾಡಿದ ತಂಡದ ಎಲ್ಲರೂ ಭೇಟಿ ನೀಡಿರುತ್ತೇವೆ. ಅಲ್ಲಿ ಸುಮಾರು ಅರ್ಧ ಗಂಟೆ ಇದ್ದೆವು . ಆರೋಪಿ ಕಚೇರಿ ಬಳಿ ರಾತ್ರಿ 10.30 ಗಂಟೆಗೆ ಹೋಗಿದ್ದೆವು. ಆಗ ಆರೋಪಿ ಜೊತೆಯಲ್ಲಿ ಬಂದಿದ್ದ. ಆರೋಪಿ ಕಚೇರಿಯಲ್ಲಿ ಆಗ ಬರವಣಿಗೆ ಮಾಡಲಿಲ್ಲ. ಆರೋಪಿ ಕಚೇರಿಯಲ್ಲಿ ಆರೋಪಿಯ ಮೇಲಾಧಿಕಾರಿ ಒಬ್ಬರು ಬಂದಿದ್ದರು. ಅವರು ಸಹಿ ಮಾಡಿರುವುದಿಲ್ಲ. ಆರೋಪಿಯ ಕಚೇರಿಗೆ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಕಚೇರಿಗೆ ಆರಕ್ಷಕ ಉಪಾಧೀಕ್ಷಕರು ಆರೋಪಿಯ ಮೇಲಾಧಿಕಾರಿಯನ್ನು ಕರೆಸಿದರು. ಪ್ರವಾಸಿ ಮಂದಿರದಲ್ಲಿ ಯಾವುದೇ ರಾಸಾಯನಿಕ ಪ್ರಕ್ರಿಯೆ ಮಾಡಿಲ್ಲ ಎಂದರೆ ಸರಿಯಲ್ಲ. ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಆರೋಪಿಯ ಕೈಗಳನ್ನು ಅದ್ದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಪ್ಯಾಂಟ್ ನ್ನು ಲೋಕಾಯುಕ್ತ ಪೊಲೀಸ್ ನವರು ಜಪ್ತು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ

ಕೈಗಳನ್ನು ಅದ್ದಿದಾಗ ತಿಳಿ ಗುಲಾಬಿ ಬಣ್ಣಕ್ಕೆ ದ್ರಾವಣ ತಿರುಗಿತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪ್ರವಾಸಿ ಮಂದಿರದಲ್ಲಿ ಪ್ರವಾಸಿ ಮಂದಿರದ ಅಧಿಕಾರಿ ಇದ್ದರಾ ಎಂದರೆ ಇರಬಹುದು . ಅವರು ಎಷ್ಟು ಜನ ಇದ್ದರು ಎಂದು ನಾನು ನೋಡಿರುವುದಿಲ್ಲ. ಅವರು ಪಂಚನಾಮೆಗೆ ಸಹಿ ಮಾಡಿರುವುದಿಲ್ಲ. ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನನ್ನ ತಪ್ಪು ಗೊತ್ತಾಗುತ್ತದೆ ಎಂದು ತಿಳಿದ ಕೂಡಲೇ ನಾನು ಸುಳ್ಳು ಸುಳ್ಳು ಉತ್ತರ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ನಕಾಶೆ ತೆಗೆದಿಲ್ಲ ಎಂದರೆ ಆ ಸಮಯದಲ್ಲಿ ತೆಗೆದಿಲ್ಲ.

9. ಧ್ವನಿ ಮುದ್ರಣದಲ್ಲಿ ಸ್ಪಷ್ಟವಾಗಿ ಧ್ವನಿ ಕೇಳಿಸಲಿಲ್ಲ. ಅದರಲ್ಲಿ ಇಬ್ಬರ ಧ್ವನಿ ಕತ್ತರಿಸಿ ಕತ್ತರಿಸಿ ಬರುತ್ತಿತ್ತು. ಆ ಸಂಭಾಷಣೆಯನ್ನು ಸಿ.ಡಿ. ಗೆ ದಾಖಲಿಸಿದ್ದು ಇರುತ್ತದೆ . ಧ್ವನಿ ಮುದ್ರಣ ಅಸ್ಪಷ್ಟವಾಗಿತ್ತು ಮತ್ತು ನಾನು ಅದನ್ನು ಕೇಳಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ವಸ್ತುಗಳನ್ನು ವಶಪಡಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲಿಗೂ ಹಾಗೂ ಅಲ್ಲಿ ವಶಪಡಿಸಿಕೊಂಡಿದ್ದಾರೆ ಎಂದು ಹೇಳಿರುವ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅವೆಲ್ಲಾ ಮುದ್ದೆ ಮಾಲುಗಳನ್ನು ಲೋಕಾಯುಕ್ತ ಕಚೇರಿಯಲ್ಲಿ ಕುಳಿತು ಹೇಗೆ ಬೇಕೋ ಹಾಗೆ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಅಥವಾ ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಮುದ್ದೆ ಮಾಲುಗಳಿಗೆ ಅದರ ಮೇಲೆ ಇರುವ ಚೀಟಿಗಳನ್ನು ಅಂಟಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಪ್ಯಾಂಟ್ ಅನ್ನು ತೆಗೆಸಿ ಬೇರೆ ಪ್ಯಾಂಟ್ ಅನ್ನು ಆರೋಪಿಗೆ ಕೊಟ್ಟರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರವಾರವನ್ನು ಬಿಡಲು ನಾನು ನನ್ನ ಮೇಲಾಧಿಕಾರಿಯವರ ಅನುಮತಿ ಪಡೆದಿದ್ದೆನಾ ಎಂದರೆ ಅವರ ಆದೇಶದ ಮೇರೆಗೆ ನಾನು ಲೋಕಾಯುಕ್ತ ಠಾಣೆಗೆ ಹೋಗಿದ್ದೆ. ನಾನು ಯಾವುದೇ ಪಂಚನಾಮೆಯಲ್ಲಿ ಭಾಗವಹಿಸದೇ ಇದ್ದರೂ ಲೋಕಾಯುಕ್ತ ಪೊಲೀಸ್ ನವರಿಗೆ ಹೆದರಿಕೊಂಡು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಲೋಕಾಯುಕ್ತ ಇಲಾಖಾ ವಿಚಾರಣೆಯಲ್ಲಿ ಒಂದು ರೀತಿ ಸಾಕ್ಷ್ಯ ಮತ್ತು ನ್ಯಾಯಾಲಯದಲ್ಲಿ ಮತ್ತೊಂದು ರೀತಿ ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ – ಇಲ್ಲ –</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.